ಅನಧಿಕೃತವಾಗಿ ಸಾರಾಯಿಯನ್ನು 7 ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದುದು ಗಮನಕ್ಕೆ ಬಂದಿದೆ.

2) ಬಂದಿದೆ.

3) ಇಂತಹ 7 ಪ್ರಕರಣಗಳಲ್ಲಿ ಪತ್ತೆ ಹಚ್ಚಿ 7 ಮೊಕದ್ದಮೆಗಳನ್ನು ದಾಖಲಿಸಿಕೊಂಡು 70.400 ಲೀ. (ಎಪ್ಪತ್ತು ಲೀಟರ್ ಮತ್ತು ನಾಲ್ಕು ನೂರು ಮಿಲಿ ಲೀಟರ್) ಸಾರಾಯಿಯನ್ನು ವಶಪಡಿಸಿಕೊಳ್ಳಲಾಗಿದೆ. ಹಾಗೂ 7 ಜನರನ್ನು ಬಂಧಿಸಲಾಗಿದೆ.

4) ಉದ್ಭವಿಸುವುದಿಲ್ಲ.

ಟೂರಿಸಮ್ ಬಾರ್ ಲೈಸನ್ಸ್ ವ್ಯಾಪ್ತಿ ಮತ್ತು ಕಾನೂನು ಬಾಹಿರ ಚಟುವಟಿಕೆಗಳು:

45 (393) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಟೂರಿಸಂ ಬಾರ್‌ಗಳಿಗೆ ನೀಡಿರುವ ಲೈಸೆನ್ಸ್ ಅವಧಿ ಎಷ್ಟು;

2) ಲೈಸೆನ್ಸ್ ಅನ್ನು ಪರವಾನಿಗೆಯಿಂದ ಬೇರೊಬ್ಬರ ಹೋಟೇಲ್‌ನಲ್ಲಿ ಲಗತ್ತಿಸಿಕೊಂಡು ವ್ಯವಹಾರ ನಡೆಸಬಹುದೇ;

3) ಲೈಸೆನ್ಸ್‌ಗೆ ಪಂಚಾಯತ್ ಪರವಾನಿಗೆ ಪಡೆಯುವುದು ಅವಶ್ಯಕವಲ್ಲವೇ;

4) ಕುಂದಾಪುರ ತಾಲ್ಲೂಕಿನ ಕಿರಿ ಮಂಜೇಶ್ವರ ಭಗೀರಥ ಬಾರನ್ನು ಏಕಾಏಕಿಯಾಗಿ 9 ಕಿ.ಮೀ. ದೂರಕ್ಕೆ ಸ್ಥಳಾಂತರಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

5) ಸಂಬಂಧಿಸಿದ ಪಂಚಾಯತ್ ಪರವಾನಿಗೆ ಪಡೆಯದೇ ಸ್ಥಳಾಂತರಿಸಿದ್ದು ಸರಿಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

1) ಪ್ರತಿಯೊಂದು ಲೈಸೆನ್ಸ್‌ನ ಅವಧಿ ಜುಲೈನಿಂದ ಆರಂಭಗೊಂಡು ಜೂನ್‌ಗೆ ಅಂತ್ಯಗೊಳ್ಳುತ್ತದೆ. ಈ ಅವಧಿಯ ಮಧ್ಯದಲ್ಲಿ ಯಾವುದೇ ಸಮಯದಲ್ಲಿ ಸನ್ನದನ್ನು ನೀಡಿದರೂ ಸನ್ನದಿನ ಅವಧಿ ಜೂನ್ 30ಕ್ಕೆ ಅಂತ್ಯಗೊಳ್ಳುತ್ತದೆ.

2) ಕಾನೂನಿನಡಿಯಲ್ಲಿ ಅವಕಾಶ ಇರುವುದಿಲ್ಲ.

3) ಅಬಕಾರಿ ಕಾಯ್ದೆ ಅನ್ವಯ ಅವಶ್ಯಕತೆ ಇರುವುದಿಲ್ಲ.

4) ಕಿರಿಮಂಜೇಶ್ವರ ಗ್ರಾಮದ ನಾಗೂರು ಪೇಟೆಯಲ್ಲಿದ್ದ ಭಗೀರಥ ಬಾರನ್ನು ಅದೇ ಪೇಟೆಯ ಇನ್ನೊಂದು ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಒಂದೇ ಗ್ರಾಮದ ಪಂಚಾಯತ್ ವ್ಯಾಪ್ತಿಯೊಳಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸ್ಥಳಾಂತರಿಸಲು ನಿಯಮದಡಿಯಲ್ಲಿ ಅವಕಾಶವಿರುತ್ತದೆ.

5) ಅಬಕಾರಿ ಕಾಯ್ದೆಯಡಿಯಲ್ಲಿ ಸ್ಥಳಾಂತರಿಸಲಾಗಿದೆ.